ರುಚಿಕರವಾದ ಉಪಹಾರ
ಸಿಹಿ–ಖಾರ ತಿಂಡಿಗಳು
ನ್ಯೂ ಕೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ

ವಾರಪತ್ರಿಕೆ

ಸ್ಥಾಪನೆ : 1948
6 ದಶಕಗಳ ವಿಶ್ವಾಸನೀಯ ಸೇವೆಯಲ್ಲಿ
ಶೇಟ್ ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 29 ॥ ಸಂಚಿಕೆ : 32॥ UDP/1263/2018-20 || R.NO.50495/91 ॥ ತಾರೀಕು : 03–09–2019 ॥ ರೂ 5/– ॥ ವಾರ್ಷಿಕ ಚಂದಾ : 300/– ಅಂಚೆಯಲ್ಲಿ : 400/

# ಓಂ ನಮೋ ವಿಘ್ನೇಶ್ವರಾಯ ನಮಃ



ಮೂಷಿಕ ವಾಹನ ಮೋದಕ ಹಸ್ತ
ಚಾಮರ ಕರ್ಣ ವಿಳಂಬಿತ ಸೂತ್ರ
ವಾಮನರೂಪ ಮಹೇಶ್ವರ ಪುತ್ರ
ವಿಘ್ನ ವಿನಾಯಕ ಪಾದ ನಮಸ್ತೆ

ಎಲ್ಲರೂ ಒಂದಾಗಿ ನಿನ್ನ
ನಮಿಸಿ ನಲಿಯೋದು ನೋಡೋಕೆ ಚೆನ್ನ
ಗರಿಕೆ ತಂದರೆ ನೀನು ಕೊಡುವೆ ವರವನ್ನ
ಗತಿ ನೀನೇ ಗಣಪನೇ ಕೈ ಹಿಡಿಯೋ ಮುನ್ನ

ಪ್ರಣಮ್ಯ ಶಿರಸಾ ದೇವಂ ಗೌರಿಪುತ್ರಂ ವಿನಾಕಯಂ
ಭಕ್ತ ವಾಸಂ ಸ್ಮರೇನಿತ್ಯಂ ಆಯುರ್ಕಾಮರ್ಥ ಸಿದ್ಧಯೇ

**ಶ್ರೀ ಗಣಪತಿ ಸರ್ವರಿಗೂ ಶುಭವನ್ನುಂಟು ಮಾಡಲಿ**



# ಶ್ರೀ ಕೋಟಿಲಿಂಗೇಶ್ವರ ಧ್ವಜಮರ ಸ್ವಾಗತ ಸಂಭ್ರಮ



ಕೋಟೇಶ್ವರದ ಶ್ರೀ ಕೋಟಿಲಿಂಗೇಶ್ವರನಿಗೆ ಸಮರ್ಪಿಸಲು ಸುಳ್ಯದಿಂದ ತರಲಾದ 90 ಅಡಿ ಉದ್ದ, 6.45 ಸುತ್ತಳತೆಯ ಧ್ವಜಮರವನ್ನು ನೆರೆದ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಸಂಭ್ರಮದಿಂದ ಪುರಮೆರವಣಿಗೆಯೊಂದಿಗೆ ಅಲಂಕಾರಿಕ ವಿಶೇಷ ವಾಹನದಲ್ಲಿ ಕೋಟೇಶ್ವರಕ್ಕೆ ಆ.28 ರಂದು ತರಲಾಯಿತು. (10ನೇ ಪುಟಕ್ಕೆ)

# ಸೆ. 9 ರಿಂದ 15ರ ವರೆಗೆ ಜೆಸಿಐ ಕುಂದಾಪುರ ಸಿಟಿ ಸಪ್ತಾಹ




ಜೆಸಿಐ ಕುಂದಾಪುರ ಸಿಟಿ –ಜೇಸಿ ಸಪ್ತಾಹ 2019 ಕುಂದಾಪುರ ಸರಕಾರಿ ಪ.ಪೂ.ಕಾಲೇಜಿನ ರೋಟರಿ ಲಕ್ಷ್ಮೀನರಸಿಂಹ ಕಲಾಮಂದಿರಲ್ಲಿ ಸೆಪ್ಟೆಂಬರ್ 9 ರಿಂದ 15ರ ತನಕ ಸಂಭ್ರಮದಿಂದ ನಡೆಯಲಿದೆ.

ಕುಂದಾಪುರ ವಿಭಾಗದ ಸಹಾಯಕ ಆಯುಕ್ತ ಡಾ.ಎಸ್.ಎಸ್. ಮಧುಕೇಶ್ವರ ಜೇಸಿ ಸಪ್ತಾಹ ಸೆ.9 ರಂದು ರಾತ್ರಿ 7ಕ್ಕೆ ಉದ್ಘಾಟಿಸಲಿದ್ದಾರೆ. ಹಲವು ಗಣ್ಯರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಮನೋರಂಜನಾ ಕಾರ್ಯಕ್ರಮ ಸಂಜೆ 6 ಗಂಟೆಯಿಂದ ಪ್ರಾರಂಭವಾಗಲಿದ್ದು ರಾತ್ರಿ 8 ಗಂಟೆಗೆ ಫಿಲ್ಮಿಡ್ಯಾನ್ಸ್ ನಡೆಯಲಿದೆ.

ಪ್ರತಿದಿನ ಸಂಜೆ 7ಕ್ಕೆ ಸಭಾಕಾರ್ಯಕ್ರಮ ನಡೆಯಲಿದ್ದು ಹಲವು ಸಾಧಕರನ್ನು ಗೌರವಿಸುವ ಕಾರ್ಯಕ್ರಮವಿದೆ.

ದಿನಾಂಕ 10 ರಂದು ಯಕ್ಷಗಾನ ಭೀಷ್ಮವಿಜಯ, 11 ರಂದು ಜಾದೂಜಾತ್ರೆ, 12ರಂದು ಸೌಂದರ್ಯಸ್ಪರ್ಧೆ, 13ರಂದು, ಆದರ್ಶ ದಂಪತಿಗಳು, 14 ರಂದು ಸಂಗೀತ ರಸಮಂಜರಿ, 15 ರಂದು ಸುಸ್ಪೈಡ್ ಸುಂದರ ನಾಟಕ ಪ್ರದರ್ಶನಗೊಳ್ಳಲಿದೆ. ತರಬೇತಿ ಶಿಬಿರಗಳು ಶಾಲಾಕಾಲೇಜುಗಳಲ್ಲಿ ನಡೆಯಲಿದೆ.

ದಿನಾಂಕ 10 ರಂದು ಸಂಜೆ 6ಕ್ಕೆ ಪುಟಾಣಿರಾಜ, ಪುಟಾಣಿ ರಾಣಿ ಸ್ಪರ್ಧೆ, 11 ರಂದು ಕೋಲಾಟ ಸ್ಪರ್ಧೆ, 13ರಂದು ಫ್ಯಾನ್ಸಿ ಡ್ರೆಸ್ ಸ್ಪರ್ಧೆ ನಡೆಯಲಿದೆ.

ದಿನಾಂಕ 14 ರಂದು ಮಧ್ಯಾಹ್ನ ರಂಗೋಲಿ, ಮೆಹಂದಿ ಚಿತ್ರಕಲೆ, ಮುಗುಳ್ನಗೆ ಸ್ಪರ್ಧೆ ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ಏರ್ಪಡಿಸಲಾಗಿದೆ.

15 ರಂದು ಸಂಜೆ 3ಕ್ಕೆ ಮುದ್ದುರಾಧ, ಮುದ್ದುಕೃಷ್ಣ ಸ್ಪರ್ಧೆ ನಡೆಯಲಿದೆ.

ಈ ಎಲ್ಲಾ ಕಾರ್ಯಕ್ರಮಗಳಿಗೆ ಸಾರ್ವಜನಿಕರು ಆಗಮಿಸಿ ಸಪ್ತಾಹ ಯಶಸ್ವಿಗೊಳಿಸಬೇಕೆಂದು ಸ್ಥಾಪಕ ಅಧ್ಯಕ್ಷ ಹುಸೈನ್ ಹೈಕಾಡಿ , ಅಧ್ಯಕ್ಷ ಪ್ರಶಾಂತ ಹವಾಲ್ದಾರ್, ಸಪ್ತಾಹ ಸಭಾಪತಿ ಶ್ರೀಧರ್ ಸುವರ್ಣ ಹಾಗೂ ಜೆಸಿ ಸದಸ್ಯರು ವಿನಂತಿಸಿದ್ದಾರೆ.